1

# ವಿಧೇಯತೆ: ಅಂದರೆ ಏನು?

*ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಆತನು ಸಿದ್ಧಿಗೆ ಬಂದ ದೇವರಿಂದ ಮೆಲ್ಕಿಜೆದೇಕನ ತರಹದ ಮಹಾ ಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರುವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು (ಇಬ್ರಿಯ 5:8, 9).*

ಒಬ್ಬನ ಸಲಹೆಯನ್ನು ಪೂರ್ಣಚಿತ್ತದಿಂದ ಪ್ರತಿಕ್ರೀಯಿಸುವದೇ ವಿಧೇಯತೆಯಾಗಿದೆ. ಅಂದರೆ ಆಜ್ಞೆಯನ್ನು ಪರಿಪಾಲಿಸುವದು ಮತ್ತು ಆಜ್ಞೆಯಲ್ಲಿದದ್ದನ್ನು ಮಾಡದೇ ಇರುವುದು ಸಹ ಆಗಿರುತ್ತದೆ. ಅನೇಕ ಸಂದರ್ಭಗಳಲ್ಲಿ, ವಿಧೇಯತೆಯು ಪ್ರಶ್ನೆಯನ್ನಾಗಲಿ ಅಥವಾ ಕಾರಣವನ್ನಾಗಲಿ ಕೇಳುವದಿಲ್ಲ, ಪ್ರಶ್ನೆ ಇಲ್ಲದೆ ಅಪ್ಪಣೆಯನ್ನು ಒಪ್ಪಿಕೊಳ್ಳುತ್ತದೆ. ವಿಧೇಯತೆಯ ಹಿನ್ನಲೆಯಲ್ಲಿ ದೇವರು ನಂಬಿಕೆಯನ್ನು ಬಯಸುತ್ತಾನೆ (ಇಬ್ರಿಯ 11:8), ನಿರೀಕ್ಷೆಯನ್ನು (1 ಯೋಹಾನ 3:3) ಮತ್ತು ಪ್ರೀತಿಯನ್ನು (ಯೋಹಾನ 14:15) ಬಯಸುತ್ತಾನೆ.

ತಂದೆಯ ಚಿತ್ತವನ್ನು ಮತ್ತು ಯೇಸುವಿಗೆ ತೋರುವ ವಿಧೇಯತೆಯು ನಮ್ಮ ರಕ್ಷಣೆಗೆ ಬುನಾದಿಯಾಗಿರುತ್ತದೆ (ಇಬ್ರಿಯ 5:9). ಯೇಸು ಕ್ರಿಸ್ತನು ಭಯಪಡಿಸುವಂತ ವ್ಯಾಖ್ಯಾನವನ್ನು ಮಾತನಾಡುವನೆಂದು ಎಚ್ಚರಿಸಲಾಗಿದೆ - ನ್ಯಾಯ ವಿಚಾರಣೆಯ ದಿನದಲ್ಲಿ ಆತನು *"ನನ್ನಿಂದ ತೊಲಗಿ ಹೋಗಿರಿ"* - ಎಂದು ಹೇಳುವನು (ಮತ್ತಾಯ 7:21-23). ಈ ನೀತಿ ನಿರ್ಣಯವು ಅವರನ್ನು ಗೊಂದಲಪಡಿಸುತ್ತದೆ. ಮತ್ತಾಯ 7ರಲ್ಲಿ ನ್ಯಾಯತೀರ್ಪಿಗೆ ಒಳಗಾಗುವವರು ಅನೈತಿಕರಾಗಲಿ, ಅಧರ್ಮಿಗಳಾಗಲಿ, ನಂಬದೆಯಿರುವವರಾಗಲಿ, ಅಥವಾ ದೇವರ ಸೇವೆಯಲ್ಲಿ ಸೋತುಹೋದವರಾಗಲಿ ಇರುವದಿಲ್ಲ. ಅವರೆಲ್ಲರೂ ಯೇಸುವಿನ ನಾಮದಲ್ಲಿ ಅದ್ಭುತಕಾರ್ಯ ಮತ್ತು ಮಹತ್ಕಾರ್ಯಗಳನ್ನು ಮಾಡಿದ್ದರು. ಅವರು ಯೇಸುವಿನ ಸೇವೆಯನ್ನು ಮಾಡಿದ್ದರೆಂಬುವದಕ್ಕೆ ಇದು ಸಾಕ್ಷಿಯಾಗಿದೆ. ಆದರೆ ಅವರು ತಮ್ಮ ಸ್ವಂತ ಇಚ್ಛೆಯ ಮೇರೆಗೆ ಕಾರ್ಯನಿರ್ವಹಿಸಿ - ತಮ್ಮ ಆಯ್ಕೆಯ ಮೇರೆಗೆ ಆತನ ಸೇವೆಯನ್ನು ಹುಡುಕಿಕೊಂಡಿದ್ದರೆ ವಿನ ಯೇಸುವಿನ ಉಪದೇಶವನ್ನು ಅನುಸರಿಸಲಿಲ್ಲ. ದೇವರ ಚಿತ್ತವನ್ನು ಈಡೇರಿಸುವವರು ಮಾತ್ರ ಪರಲೋಕ ರಾಜ್ಯವನ್ನು ಸೇರುವರು.

ಯೇಸುವಿನ ಇತರ ವ್ಯಾಖ್ಯಾನಗಳು ಈ ಸತ್ಯವನ್ನು ಪುಷ್ಟಿಕರಿಸುತ್ತದೆ:

> ಯಾರು ದೇವರ ವಾಕ್ಯವನ್ನು ಕೇಳಿ ಅದರಂತೆ *ನಡೆಯುತ್ತಾರೋ* ಅವರೇ ನನಗೆ ತಾಯಿಯೂ ಅಣ್ಣ ತಮ್ಮಂದಿರೂ ಆಗಬೇಕು ಎಂದು ಉತ್ತರಕೊಟ್ಟನು (ಲೂಕ 8:21; ಒತ್ತಿ ಹೇಳಿದ್ದು ನನ್ನದು; ಮತ್ತೆ ನೋಡಿ ಮತ್ತಾಯ 12:50).
>
> ಆತನು ಹಾಗನ್ನ ಬೇಡ, ದೇವರ ವಾಕ್ಯವನ್ನು ಕೇಳಿ ಅದಕ್ಕೆ ಸರಿಯಾಗಿ *ನಡಕೊಳ್ಳು ವವರೇ* ಧನ್ಯರು ಅಂದನು (ಲೂಕ 11:28; ಒತ್ತಿ ಹೇಳಿದ್ದು ನನ್ನದು).
>
> ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ *ಒಳಗಾಗದವನು* ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು (ಯೋಹಾನ 3:36; ಒತ್ತಿ ಹೇಳಿದ್ದು ನನ್ನದು).
>
> ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ

> ತೀರ್ಪುಮಾಡುವಂಥದು ಒಂದು ಇದೆ, ಅದು ಯಾವದಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪುಮಾಡುವದು. ಯಾಕಂದರೆ ನನ್ನಷ್ಟಕ್ಕೆ ನಾನೇ ಮಾತಾಡಿದವನಲ್ಲ; ನನ್ನನ್ನು ಕಳುಹಿಸಿಕೊಟ್ಟ ತಂದೆಯೇ - ನೀನು ಇಂಥಿಂಥದನ್ನು ಹೇಳಬೇಕು. ಹೀಗೆ ಹೀಗೆ ಮಾತಾಡಬೇಕು ಎಂಬದಾಗಿ ನನಗೆ ಆಜ್ಞೆಕೊಟ್ಟಿದ್ದಾನೆ. ಆತನ ಆಜ್ಞೆ ನಿತ್ಯಜೀವವಾಗಿದೆ ಎಂದು ಬಲ್ಲೆನು. ಆದದರಿಂದ ನಾನು ಮಾತಾಡುವದನ್ನೆಲ್ಲಾ ತಂದೆ ನನಗೆ ಹೇಳಿದ ಮೇರೆಗೆ ಮಾತಾಡುತ್ತೇನೆ ಅಂದನು (ಯೋಹಾನ 12:48-50).

ತಂದೆಯ ಮಾತುಗಳನ್ನೇ, ಯೇಸು ಎಚ್ಚರಿಕೆಯಿಂದ ಉಪದೇಶಿಸಿದನು. ಆತನು ಪರಿಶುದ್ಧಾತ್ಮನ ಕುರಿತು ಆತನು ತನ್ನದೆ ಆದದ್ದನ್ನು ಹೇಳದೇ ಯೇಸು ಆತನಿಗೆ ತಿಳಿಸಿದ್ದನ್ನೆ ಮಾತನಾಡಿದನು (ಯೋಹಾನ 16:14). ಯೇಸುವಿನ ನಾಮದಲ್ಲಿ ಬೋಧಿಸುವವರಲ್ಲಿ, ಆತನು ಇದನ್ನೆ ಬಯಸುತ್ತಾನೆ ಇನ್ನೊಂದು ಸುವಾರ್ತೆಯನ್ನು ಸಾರುವವನು ಶಾಪಗ್ರಸ್ತನು (ಗಲಾತ್ಯ 1:8, 9).

ರಕ್ಷಣೆ ಮತ್ತು ದೇವರೊಂದಿಗಿನ ನಮ್ಮ ಸಂಬಂಧವು ಆತನ ಚಿತ್ತವನ್ನು ನೇರವೇರಿಸುವಲ್ಲಿ ಅವಲಂಭಿಸಿವೆ ನಮ್ಮ ಸಂಬಂಧವು ಆತನ ಚಿತ್ತವನ್ನು ನೆರವೇರಿಸುವಲ್ಲಿ ಅವಲಂಭಿಸಿವೆ. ನಮ್ಮ ಸ್ವಂತ ಅಭಿಲಾಷೆಗಳ ಪ್ರಕಾರ ಆತನ ಸೇವೆಯನ್ನು ಮಾಡಬೇಕೆಂದು ಆತನು ಬಯಸುವದಿಲ್ಲ.

> ದೇವರ ಕಟ್ಟಳೆಗಳನ್ನು *ಅನುಸರಿಸಿ* ನಡೆಯುವದೇ ಪ್ರಯೋಜನವಾಗಿದೆ (1 ಕೊರಿಂಥ 7:19ಬಿ; ಒತ್ತಿ ಹೇಳಿದ್ದು ನನ್ನದು).

> ಲೋಕವು ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ *ದೇವರ ಚಿತ್ತವನ್ನು ನೆರವೇರಿಸುವವನು* ಎಂದೆಂದಿಗೂ ಇರುವನು (1 ಯೋಹಾನ 2:17; ಒತ್ತಿ ಹೇಳಿದ್ದು ನನ್ನದು).

ವಿಧೇಯತೆಯನ್ನು ದೇವರು ಮೆಚ್ಚುತ್ತಾನೆ ಆತನ ಕಟ್ಟಳೆಗಳನ್ನು ನಿಯಮದಂತೆ ಪಾಲಿಸುವದನ್ನು ಆತನು ಒಪ್ಪಿಕೊಳ್ಳುತ್ತಾನೆ. ನಮ್ಮ ಇಷ್ಟವಾಗಲಿ ಅಥವಾ ನಮ್ಮ ಆಲೋಚನೆಯಾಗಲಿ ಆತನಿಗೆ ಅಗತ್ಯವಿಲ್ಲವೆಂದು ಗ್ರಂಥಗಳು ಪುಷ್ಟಿಕರಿಸುತ್ತವೆ.

ದೇವರನ್ನು ಮೆಚ್ಚಿಸಬೇಕಾಗಿದ್ದರೆ, ಆತನ ವಾಕ್ಯದಲ್ಲಿ ನಂಬಿಕೆಯಿಡಬೇಕು. ವಿಧೇಯತೆಯ ಮೂಲಕ ನಂಬಿಕೆಯನ್ನು ತೋರ್ಪಡಿಸಬೇಕು ಅದಕ್ಕೆ ವಿರುದ್ಧವಾದದ್ದು ಅವಿಧೇಯತೆಯಾಗುತ್ತದೆ.